ರೈತರ ಬೆಳೆಗೆ ನ್ಯಾಯ ಬೆಲೆ ದೊರಕಿಸುವ ಬಗ್ಗೆ

೨೯ (೭೪) ಶ್ರೀ ಆರ್. ವೆಂಕಟರಾಮಯ್ಯ, (ಮುಳಬಾಗಿಲು).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೃಷಿ ಬೆಲೆ ಸಲಹಾ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ?

ಆ) ಸದರಿ ಸಮಿತಿಗೆ ನಿಗದಿ ಮಾಡಿದ ಅವಧಿಎಷ್ಟು ಹಾಗೂ ಅವಧಿಯನ್ನು ವಿಸ್ತರಿಸಲಾಗಿದೆಯೆ?

ಇ) ಸಮಿತಿಯ ವರದಿಯನ್ನು ಬೇಗ ಪಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ವರದಿಯ ಶಿಫಾರಸ್ಸುಗಳನ್ನು ಪಡೆದು ಸರ್ಕಾರ ರೈತರಿಗೆ ನ್ಯಾಯಬೆಲೆಕೊಡಲು ತುರ್ತು ಕ್ರಮ ಕೈಗೊಳ್ಳುವುದೇ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ(ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು,

ಆ) ಸಮಿತಿಗೆ ಕಾಲಾವಧಿಯನ್ನು ನಿಗದಿ ಪಡಿಸಿಲ್ಲ.

ಇ) ಈ ಸಮಿತಿಯನ್ನು ರೈತರ ವಿವಿಧ ಸಮಸ್ಯೆಗಳನ್ನು ಅಭ್ಯಾಸಿಸಿ ಅವುಗಳನ್ನು ನಿವಾರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು ರಚಿಸಲಾಗಿದೆ. ಆದ್ದರಿಂದ ಈ ಸಮಿತಿಯು ರೈತರ ವಿವಿಧ ಸಮಸ್ಯೆಗಳ ಬಗೆ ಅಭ್ಯಾಸಿಸಿ ತನ್ನ ವರದಿಗಳು ಸಿದ್ಧವಾದ ಕೂಡಲೇ ಸರ್ಕಾರಕ್ಕೆ ಒಪ್ಪಿಸುತ್ತದೆ.

ಈ) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ ಕೃಷಿ ಉತ್ಪನ್ನಗಳ ಬೆಲೆಗಳನ್ನು ನಿಗದಿ ಪಡಿಸುತ್ತದೆ, ಈ ಬಗ್ಗೆ ರಾಜ್ಯ ಸರ್ಕಾರವು ಕೃಷಿ ಇಲಾಖೆ ಹಾಗೂ ಪರಿಣಿತ ಸಮಿತಿಯ ವರದಿಗಳ ಆಧಾರದ ಮೇಲೆ ತನ್ನ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿದೆ.

ಶಿಕ್ಷಣ ವಿಧೇಯಕದ ಬಗ್ಗೆ

೩೦ (೭೭) ಶ್ರೀ ಆರ್. ವೆಂಕಟರಾಮಯ್ಯನವರು(ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಈ ಸದನವು ಶಿಕ್ಷಣ ವಿಧೇಯಕವನ್ನು ಅಂಗೀಕರಿಸಿ ಎಷ್ಟು ಕಾಲವಾಯ್ತು ?

ಆ) ಈಗ ಕೇಂದ್ರ ಸರ್ಕಾರದಿಂದ ಈ ವಿಧೇಯಕದ ಬಗ್ಗೆ ವಿವರ ಕೇಳಿ ಅಥವಾ ಪ್ರಶ್ನೆಗಳನ್ನು ಎತ್ತಿ ಪತ್ರ ಬಂದಿದೆಯೇ ?

ಇ) ಅಧ್ಯಕ್ಷರು ವಿಧೇಯಕಕ್ಕೆ ಸಹಿ ಇನ್ನೂ ಹಾಕದಿರುವುದಕ್ಕೆ ಕಾರಣಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಸುಮಾರು ಮೂರು ವರ್ಷ.

ಆ) ಕೇಂದ್ರ ಸರ್ಕಾರ ಕೆಲವೊಂದು ವಿವರಗಳನ್ನು ಎಲ್ಲಾ ವಿವರಗಳನ್ನು ಡಿಸೆಂಬರ್ ೮೪ ಮತ್ತು ಜನವರಿ ೮೫ರಲ್ಲಿ ಒದಗಿಸಲಾಗಿದೆ.

ಇ) ಕೇಂದ್ರ ಸರ್ಕಾರ ವಿಳಂಬಕ್ಕೆ ಯಾವುದೇ ಕಾರಣ ನೀಡಿಲ್ಲ.

ರಾಣಿಬೆನ್ನೂರು ತಾಲ್ಲೂಕಿನ ಮೈದೂರ ಯಾತ ನೀರಾವರಿ ಯೋಜನೆ ಬಗ್ಗೆ

೩೧ (೧೮೫) ಶ್ರೀ ಕೆ. ಬಿ. ಕೋಳಿವಾಡ (ರಾಣಿಬೆನ್ನೂರು).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಣಿಬೆನ್ನೂರು ತಾಲ್ಲೂಕಿನ ಮೈದೂರ ಯಾತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ?

ಆ) ೧೯೮೭-೮೮ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸದರಿ ಯೋಜನೆಯನ್ನು ಸೇರಿಸಲಾಗಿದೆಯೇ?